# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1092 (463)
2) ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು)
3) ಉತ್ತರಿಸುವ ದಿನಾಂಕ : 14.08.2025
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನಲ್ಲಿ ತೆರಿಗೆ ವಂಚಿಸುವ ವ್ಯಾಪಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ತೆರಿಗೆ ವಂಚನೆ ಪ್ರಕರಣಗಳು ವಲಯದ ಗಮನಕ್ಕೆ ಬಂದ ತಕ್ಷಣ ಮತ್ತು ವಲಯದ ಅಧಿಕಾರಿಗಳು ತೆರಿಗೆ ವಂಚನೆ ಪ್ರಕರಣಗಳನ್ನು ಗುರುತಿಸಿದ ತಕ್ಷಣವೇ ಇಂತಹ ತೆರಿಗೆ ವಂಚನೆಯ ಪ್ರಕರಣಗಳ ವಿರುದ್ಧ ಸರಕು ಮತ್ತು ಸೇವಾ ತೆರಿಗೆ ಪ್ರಕರಣದ 67(1) (2) ರಡಿಯಲ್ಲಿ ಹಾಗೂ ಪ್ರಕರಣ 129 ಮತ್ತು 130 ರಡಿಯಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. |
| ಆ) | ಯಲಹಂಕ ಉಪನಗರದಲ್ಲಿ ಅನೇಕ ಮನೆಗಳಲ್ಲಿ ಗುಟ್ಕಾ, ಬೀಡಿ, ಸಿಗರೇಟು, ತಂಬಾಕು ಉತ್ಪನ್ನದ ಕೋಟ್ಯಾಂತರ ಮೌಲ್ಯದ ದಾಸ್ತಾನಿದ್ದು, ಉತ್ಪನ್ನಗಳು ಪ್ರತಿನಿತ್ಯ ಹಗಲು ರಾತ್ರಿ ವಾಣಿಜ್ಯ ತೆರಿಗೆ ಇಲಾಖೆಯವರ ಗಮನಕ್ಕೆ ಬಾರದೆ ವಂಚಿಸಿ ಮನೆಯಿಂದಲೇ ನಗದು ಹಣದ ಮೂಲಕ ಮಾತ್ರ 24x7 ವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಾಣಿಜ್ಯ ತೆರಿಗೆ ಇಲಾಖೆಯ ಜಾರಿ ವಿಭಾಗದ ಗಮನಕ್ಕೆ ಬಂದಿರುವುದಿಲ್ಲ.<br>ಅಂತಹ ಪ್ರಕರಣಗಳು ಕಂಡುಬಂದಲ್ಲಿ ತಪಾಸಣೆಯನ್ನು ಕೈಗೊಳ್ಳಲಾಗುವುದು. |
| ಇ) | ಬಂದಿದ್ದಲ್ಲಿ, ಎಷ್ಟು ಜನರ ಮೇಲೆ ಕ್ರಮ ವಹಿಸಲಾಗಿದೆ; (ವಿವರ ಒದಗಿಸುವುದು) ಇಲ್ಲದಿದ್ದಲ್ಲಿ, ತಪಾಸಣಾ ಕಾರ್ಯ ಸೂಚಿಯನ್ನು ಅಧಿಕಾರಿಗಳಿಗೆ ನೀಡಲು ಇರುವ ತೊಂದರೆಯೇನು; | ಮೇಲೆ ನೀಡಿರುವ ಉತ್ತರದ ಹಿನ್ನಲೆಯಲ್ಲಿ, ಈ ಪ್ರಶ್ನೆಯು ಉದ್ಭವಿಸುವುದಿಲ್ಲ. |
| ಈ) | ಬೆಂಗಳೂರು ದಕ್ಷಿಣ ವಲಯ (ಜಾರಿ) ವಿಭಾಗದ ಅಧಿಕಾರಿಗಳು ಈ ಭಾರಿ ತೆರಿಗೆ ವಂಚನೆ ಜಾಲವನ್ನು ತಪಾಸಣೆ ಮಾಡಲು ವಿಫಲರಾಗಲು ಕಾರಣವೇನು; ಈ ಅಧಿಕಾರಿಗಳೂ ಸಹ ಈ ವಂಚನೆಯಲ್ಲಿ ಭಾಗಿಯಾಗಿರುವ ಬಗ್ಗೆ ಕೂಡ ಸರ್ಕಾರ ಗಂಭೀರವಾಗಿ ಪರಿಶೀಲಿಸುವುದೆ? | ತೆರಿಗೆ ವಂಚನೆಯ ಪ್ರಕರಣಗಳ ವಿರುದ್ಧ ಬೆಂಗಳೂರು ದಕ್ಷಿಣ ವಲಯ (ಜಾರಿ) ವಿಭಾಗದ ಅಧಿಕಾರಿಗಳು ಕಾಲಕಾಲಕ್ಕೆ ಸರಕು ಮತ್ತು ಸೇವಾ ತೆರಿಗೆ ಪ್ರಕರಣದ 67(1) (2) ರಡಿಯಲ್ಲಿ ಹಾಗೂ ಪ್ರಕರಣ 129 ಮತ್ತು 130 ರಡಿಯಲ್ಲಿ ನಿಯಮಾನುಸಾರ ತಪಾಸಣಾ ಕಾರ್ಯ ಸೂಚಿಯನ್ನು ಪಡೆದು ತೆರಿಗೆಯ ಸಂಗ್ರಹಣೆಯಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>2024-25ನೇ ಸಾಲಿನಲ್ಲಿ ಒಟ್ಟು 9,077 ತಪಾಸಣೆಗಳನ್ನು ಕೈಗೊಂಡಿದ್ದು, ಬಚ್ಚಿಟ್ಟ ವಹಿವಾಟು ರೂ.16,004 ಕೋಟಿ ರೂ.ಗಳನ್ನು ಪತ್ತೆ ಹಚ್ಚಲಾಗಿರುತ್ತದೆ. ಇದರ ತೆರಿಗೆ ಭಾದ್ಯತೆ ಮೊತ್ತವು ರೂ.11,483 ಕೋಟಿ ಒಳಗೊಂಡಿದ್ದು, ಇದರಲ್ಲಿ ರೂ.2,667 ಕೋಟಿ ತೆರಿಗೆಯನ್ನು ಸಂಗ್ರಹಿಸಲಾಗಿದೆ. |

**ಸಂಖ್ಯೆ: ಆಇ 58 ಸಿಎಸ್ಎಲ್ 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ